1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 131/2022

ದಿನಾಂಕ ಃ 04.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 2 ಪಿ. ಡಬ್ಲ್ಯೂ:2

| | |
|---|---|
| ಸಾಕ್ಷಿದಾರರ ಹೆಸರು | ನಿಂಗಯ್ಯ |
| ತಂದೆಯ ಹೆಸರು | ಸಣ್ಣಯ್ಯ |
| ವಯಸ್ಸು | 50 ವರ್ಷ |
| ಉದ್ಯೋಗ | ರೇಷ್ಮೆ ಕೂಲಿ ಕೆಲಸ |
| ವಾಸ | ದಬ್ಬಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ. 1 ರವರು ನನ್ನ ತಮ್ಮ. ಚಾಸಾ. 3 ರವರು ನನ್ನ ಹೆಂಡತಿ. ಚಾಸಾ. 4 ಮತ್ತು 5 ರವರು ಗೊತ್ತು. ನ್ಯಾಯಾಲಯದ ಮುಂದೆ ಇರುವ 1 ರಿಂದ 3 ನೇ ಆರೋಪಿತರು ಗೊತ್ತು, ಅವರು ನಮ್ಮ ಊರಿನವರು. ಅವರು ಚಿಕ್ಕಂದಿನಿಂದಲೂ ನನಗೆ ಗೊತ್ತು. ನಾನು ರೇಷ್ಮೆ ಕೆಲಸ ಮತ್ತು ಬೇರೆ ಕೂಲಿಗೆ ಕೂಡ ಹೋಗುತ್ತೇನೆ. ನಾನು ನೆಟ್ಟಕಲ್ಲು ನಾಗರಾಜು ಎನ್ನುವವರ ಬಳಿ ಕೆಲಸಕ್ಕೆ ಹೋಗುತ್ತೇನೆ. ನಮ್ಮ ಊರಿನಿಂದ ನಾಗರಾಜು ರವರು ತೋಟವು 1 ಮೈಲಿ ದೂರ ಇದೆ. ಅಲ್ಲಿಗೆ ಸುಮಾರು 20 ಜನ ಕೂಲಿಗೆ ಬರುತ್ತಾರೆ. ನಾನು ಮಾಮೂಲಿಯಾಗಿ 9.00 ಗಂಟೆಗೆ ಕೆಲಸಕ್ಕೆ ಹೋಗುತ್ತೇನೆ. ನಾಗರಾಜು ರವರ ತೋಟದಲ್ಲಿ ಹಾಲು ಕರೆಯುವ ಕೆಲಸ ಮಾಡುತ್ತೇನೆ. ಅಲ್ಲಿ 20 ದನಗಳು ಇದ್ದವು. ಬೆಳಗ್ಗೆ 4.30 ಕ್ಕೆ ಹಾಲು ಕರೆಯುವ ಕೆಲಸ ಮಾಡಬೇಕು. ನಾನು ಬೆಳಗ್ಗೆ 4.30 ಕ್ಕೆ ಹಾಲು ಕರೆಯಲು ಹೋಗಿ, 9.00 ಗಂಟೆಗೆ ತೋಟದ ಕೆಲಸಕ್ಕೆ ಹೋಗುತ್ತೇನೆ. ಹಾಲು ಕರೆದು ಹಾಲನ್ನು ಡೈರಿಗೆ ಹಾಕಬೇಕು. ಹಾಲನ್ನು ಗಾಡಿಯಲ್ಲಿ ತೆಗೆದುಕೊಂಡು ಹೋಗುತ್ತೇನೆ.
2. 3 ರಿಂದ 4 ವರುಷಗಳ ಹಿಂದೆ, ಹಾಲು ಕರೆಯಲು ನೆಟ್ಟಕಲ್ಲು ತೋಟಕ್ಕೆ ಹೋಗುತ್ತಿದ್ದೆನು. ನಾನು ಟಿ ವಿ ಎಸ್ ಗಾಡಿಯಲ್ಲಿ ಹೋಗುತ್ತಿದ್ದೆನು. ತೋಟದ ಬಳಿ ರಸ್ತೆಯಲ್ಲಿ ಆನಂದ ಮತ್ತು ಇನ್ನೊಬ್ಬ ಗಂಡಸರು ಬಂದು ಕುಡಗೋಲಿನಲ್ಲಿ ನನ್ನ ಬಲಭಾಗದ ಕಿವಿಯ ಬಳಿ, ಬಾಯಿ ಮತ್ತು ಮೂಗಿಗೆ ಕುಡಗೋಲಿನಲ್ಲಿ ನನಗೆ ಹೊಡೆದರು. ನಾನು ತಲೆಗೆ ಬಟ್ಟೆ

ಸುತ್ತಿಕೊಂಡು ದಬ್ಬಹಳ್ಳಿಗೆ ರಸ್ತೆಯಲ್ಲಿ ಹೋಗುತ್ತಿದ್ದೆನು. ನಾನು ಬಿದ್ದಿದ್ದ ಜಾಗದಿಂದ ನನ್ನ ತಮ್ಮ ನನ್ನನ್ನು ಮಂಡ್ಯ ಆಸ್ಪತ್ರೆಗೆ ಕರೆದುಕೊಂಡು ಹೋದರು.

3. 2 ಮತ್ತು 3 ನೇ ಆರೋಪಿತರು ನಾಗರಾಜು ರವರ ತೋಟಕ್ಕೆ ಕೆಲಸಕ್ಕೆ ಬರುತ್ತಿದ್ದರು. ಆನಂದ 2 ಮತ್ತು 3 ನೇ ಆರೋಪಿತರ ಮನೆಗೆ ಹೋಗುತ್ತಿದ್ದನು. ಆನಂದ ಮತ್ತು 2 ಮತ್ತು 3 ನೇ ಆರೋಪಿತರು ಸಂಬಂಧಿಕರು ಅಲ್ಲ. ಶಾಂತಮ್ಮನ ವಿಚಾರದಲ್ಲಿ 1 ನೇ ಆರೋಪಿ ನನಗೆ ಹೊಡೆದಿದ್ದಾರೆ. 2 ನೇ ಆರೋಪಿ ಕೂಡ ನಾನು ಕೆಲಸ ಮಾಡುತ್ತಿದ್ದ ತೋಟದಲ್ಲಿಯೇ ಕೆಲಸ ಮಾಡುತ್ತಿದ್ದ ಕಾರಣ ನನಗೆ 1 ನೇ ಆರೋಪಿ ಹಲ್ಲೆ ಮಾಡಿದ್ದಾನೆ. ಶಾಂತಮ್ಮನ ವಿಚಾರದಲ್ಲಿ ಆ ಹಿಂದೆ, 1 ನೇ ಆರೋಪಿ ನನ್ನ ಜೊತೆ ಗಲಾಟೆ ಮಾಡಿಲ್ಲ.

4. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿದ್ದಾರೆ. ನಾನು ಆ ದಿನ ಹಾಲು ಕರೆಯಲು ಹೋಗಲು ಬಳಸಿದ್ದ ಬೈಕ್ ನ್ನು ನೋಡಿದರೆ ಗುರುತಿಸುತ್ತೇನೆ. ಆ ಗಾಡಿಯನ್ನು ನಾನು ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿದ್ದೇನೆ. 1 ನೇ ಆರೋಪಿಯು ನನಗೆ ಹೊಡೆಯಲು ಬಳಸಿದ ಕುಡಗೋಲನ್ನು ನೋಡಿದರೆ ಗುರುತಿಸುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಯಾದವ ಕೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 131/2022

ದಿನಾಂಕ ಃ 04.08.2026 ರಂದು ಮಧ್ಯಾಹ್ನ 4.00 ಗಂಟೆಗೆ ಪುನಃ ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

5. ಸಾಕ್ಷಿಯು ಮುಮಾ. 3 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಬಿಳಿಯ ಬಟ್ಟೆ ಚೀಲದಲ್ಲಿ ಸುತ್ತಿ ಮೊಹರು ಮಾಡಿದ ಒಂದು ಮರದ ಹಿಡಿ ಇರುವ ಕುಡಗೋಲನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಅದರಿಂದಲೇ ಹೊಡೆದಿದ್ದು ಎಂದು ಗುರುತಿಸಿದ ಕಾರಣ ಅದನ್ನು ಮುಮಾ.4 ಎಂದು ಗುರುತಿಸಲಾಯಿತು. ಪೊಲೀಸರಿಗೆ, ನಾನು ಅದೇ ಆಯುಧದಿಂದ 1 ನೇ ಆರೋಪಿಯು ನನಗೆ ಹೊಡೆದಿದ್ದು ಹೇಳಿದ್ದೇನೆ ಮತ್ತು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ. ನಾನು ಆಸ್ಪತ್ರೆಯಲ್ಲಿ 20 ದಿನ ಇದ್ದೆನು. ನನ್ನ ಕಿವಿಗೆ ಏಟಾದ ಕಾರಣ, ನನಗೆ ಈಗಲೂ ಕಿವಿಯ ಬಳಿ ನೋವು ಇದೆ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

5. ನಾಗರಾಜು ರವರ ತೋಟಕ್ಕೆ ನಾನು ನಮ್ಮ ಗ್ರಾಮದಿಂದ ಕೂಲಿ ಆಳುಗಳನ್ನು ಕೂಡ ಕರೆದುಕೊಂಡು ಹೋಗುತ್ತಿದ್ದೆ ಎಂದರೆ ಸರಿ. 2 ನೇ ಆರೋಪಿ-ಶಾಂತಮ್ಮಳನ್ನು ಕೂಡ ನಾನೇ ನಾಗರಾಜುರವರ ತೋಟಕ್ಕೆ ಕೂಲಿ ಆಳುಗಳಾಗಿ ಕರೆದುಕೊಂಡು ಹೋಗುತ್ತಿದ್ದೆ ಎಂದರೆ ಸರಿ. ಆ ಕಾರಣದಿಂದ ನನ್ನ ಜೊತೆ ಶಾಂತಮ್ಮ ತುಂಬಾ ಸಲಿಗೆಯಿಂದ ಇದ್ದಳು ಎಂದರೆ ಸರಿ. ಈ ಸಲುಗೆ ಬೆಳೆದು ನಮ್ಮಿಬ್ಬರೊಳಗೆ ದೇಹ ಸಂಬಂಧ ಶುರುವಾಯಿತು ಎಂದರೆ ಸರಿಯಲ್ಲ. ಆ ಸಮಯಕ್ಕೆ ಶಾಂತಮ್ಮಳ ದೂರದ ಸಂಬಂಧಿ 1 ನೇ ಆರೋಪಿ ಶಾಂತಮ್ಮಳ ಮನೆಗೆ ಬಂದು ಸೇರಿಕೊಂಡ ಎಂದರೆ ಸರಿ. ಆಗ ಶಾಂತಮ್ಮ ನನ್ನ ಜೊತೆಗಿನ ಸಂಪರ್ಕ ಕಡಿಮೆ ಮಾಡಿ, 1 ನೇ ಆರೋಪಿಯ ಜೊತೆ ಸಂಬಂಧ ಬೆಳೆಸಿದಳು ಎಂದರೆ ಸರಿ. ನಂತರ ಶಾಂತಮ್ಮ ನನ್ನ ಜೊತೆ ಕೂಲಿ ಕೆಲಸಕ್ಕೆ ಬಾರದೇ ಸರಿಯಾಗಿ ಮಾತನಾಡುತ್ತಿರಲಿಲ್ಲ ಎಂದರೆ ಸರಿ. ಆಗ ನಾನು

ಅವಳನ್ನು ಕೂಲಿ ಕೆಲಸಕ್ಕೆ ಕರೆಯುವ ನೆಪದಲ್ಲಿ ಅವರ ಮನೆಯ ಬಳಿಗೆ ಹೋಗಿ ಅವಳನ್ನು ಮಾತನಾಡಿಸಲು ಪ್ರಯತ್ನಿಸುತ್ತಿದ್ದೆ ಎಂದರೆ ಸರಿಯಲ್ಲ. ಈ ವಿಚಾರ 1 ನೇ ಆರೋಪಿಗೆ ಗೊತ್ತಾಗಿ, ಆತ ನನಗೆ ಇನ್ನು ಮುಂದೆ ಶಾಂತಮ್ಮಳು ನಾಗರಾಜು ರವರ ತೋಟಕ್ಕೆ ಬರುವುದಿಲ್ಲ, ಅವಳನ್ನು ಮಾತನಾಡಿಸಲು ಪ್ರಯತ್ನಿಸಬೇಡ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಆದರೂ ಕೂಡ ನಾನು ಶಾಂತಮ್ಮಳನ್ನು ಮಾತನಾಡಿಸಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. 3 ನೇ ಆರೋಪಿಯು ಕೂಡ, ಮನೆಯ ಬಳಿ ಬರಬೇಡ, ಶಾಂತಮ್ಮಳನ್ನು ಮಾತನಾಡಿಸಬೇಡ ಎಂದು ತಾಕಿತು ಹಾಕಿದ್ದರುಎಂದರೆ ಸರಿಯಲ್ಲ. ಆದರೂ ಕೂಡ ನಾಗರಾಜು ರವರ ತೋಟಕೆಕ ಶಾಂತಮ್ಮಳು ಬಂದಾಗ ನಾನು ಅವಳನ್ನು ಮಾತನಾಡಿಸಲು ಪ್ರಯತ್ನಿಸುತ್ತಿದ್ದೆ, ಇದರಿಂದ ಅವಳು ಅಲ್ಲಿಗೆ ಕೂಲಿ ಕೆಲಸಕ್ಕೆ ಬರುವುದನ್ನೇ ನಿಲ್ಲಿಸಿದಳು ಎಂದರೆ ಸರಿಯಲ್ಲ. ಇದೇ ಕಾರಣಕ್ಕೆ, 1 ನೇ ಆರೋಪಿಯು, ನಾನು ಶಾಂತಮ್ಮಳ ಜೊತೆ ಸಂಬಂಧ ಇಟ್ಟುಕೊಂಡಿದ್ದೇನೆ ಎಂದು ನನ್ನ ಮೇಲೆ ಹೇಳಿದಂತೆ ಹಲ್ಲೆ ಮಾಡಿದರು ಎಂದರೆ ಸರಿ.

6. ಘಟನೆಯಾದ ದಿನ ನಾನು ಹೆಗಲ ಮೇಲೆ ಟವಲ್ ಹಾಕಿಕೊಂಡು ಬರುತ್ತಿದ್ದಾಗ ಅಶೋಕ ರವರ ಅಂಗಡಿಯ ನೇರಕ್ಕೆ ಬಂದಾಗ, ನನ್ನ ತಮ್ಮ ಚಾಸಾ. 1 ರವರನ್ನು ನೋಡಿ, ನಾನು ಕೆಳಗಡೆ ಬಿದ್ದು ಹೋದೆ ಎಂದರೆ ಸರಿ. ಅಲ್ಲಿಯೇ ನಾನು ಈ ವಿಚಾರವನ್ನು ಚಾಸಾ. 1 ರವರಿಗೆ ಹೇಳಿದ್ದು ಎಂದರೆ ಸರಿ.

**ಪಾಟೀ ಸವಾಲು ಃ 1 ನೇ ಆರೋಪಿ ಪರ ಶ್ರೀ ಎಂ ಹೆಚ್ ವಕೀಲರಿಂದ**

7. ನಮ್ಮ ಮನೆಯಿಂದ ಬೆಳಕವಾಡಿ ಪೊಲೀಸ್ ಠಾಣೆ 15 ಕಿಮೀ ದೂರ ಇದೆ. ಬೆಳಕವಾಡಿ ಪೊಲೀಸ್ ಠಾಣೆಯಿಂದ ನಮ್ಮ ಊರಿಗೆ ಗಸ್ತಿಗೆ ಬರುತ್ತಾರೆ ಎಂದರೆ ಸರಿ. ಗಸ್ತಿಗೆ ಬರುವ ಪೊಲೀಸರನ್ನು ನಾನು ನೋಡಿದ್ದೇನೆ ಎಂದರೆ ಸರಿ. ಹಾಗೆ ಪೊಲೀಸರು ಬಂದಾಗ, 1 ನೇ ಆರೋಪಿಯ ಮೇಲೆ ಒಂದು ಪ್ರಕರಣ ದಾಖಲು ಮಾಡಬೇಕು ಎಂದು ಹೇಳಿ ನಾನು ಬಿದ್ದು ಏಟಾಗಿರುವ ಸಂದರ್ಭವನ್ನು ಉಪಯೋಗಿಸಿ 1 ನೇ ಆರೋಪಿಯ ಮೇಲೆ ಸುಳ್ಳು ಪ್ರಕರಣ ಹಾಕಿದ್ದಾರೆ ಎಂದರೆ ಸರಿಯಲ್ಲ. ನಾನು ಗಾಡಿಯಿಂದ ಬಿದ್ದು, ಏಟು ಆಗಿರುವುದನ್ನು ಆರೋಪಿ ಹಲ್ಲೆ ಮಾಡಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. 1 ನೇ ಆರೋಪಿ ಊರಿನಿಂದ ನಮ್ಮ ಮನೆ ಎಷ್ಟು ದೂರ ಇದೆ ಎಂದು ಗೊತ್ತಿಲ್ಲ. ನಮ್ಮ ಊರಿನಿಂದ 1 ನೇ ಆರೋಪಿಯ ಊರು 70 ಕಿಮೀ ದೂರ ಇದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯು ನನಗೆ ಯಾವುದೇ ಹಲ್ಲೆ ಮಾಡಿಲ್ಲ , ನಾನು ಬಿದ್ದು ಏಟು

ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗಲು ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಮಾಡಿ ಪೊಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಒಬ್ಬ ಮನಷ್ಯನಿಗೆ ಹೊಡೆದರೆ ಬಲಭಾಗಕ್ಕೆ ಏಟು ಬೀಳುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಗಾಡಿಯಿಂದ ಮಕಾಡೆ ಬಿದ್ದ ಕಾರಣ ನನ್ನ ಮೂಗು ಮತುತ ಕಿವಿಯ ಭಾಗಕ್ಕೆ ಗಾಯ ಆಗಿತ್ತು ಎಂದರೆ ಸರಿಯಲ್ಲ. 1 ನೇ ಆರೋಪಿಯ ಜೊತೆ ಇನ್ನೊಬ್ಬ ಬಂದು ಹೊಡೆದ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿನ 1 ನೇ ಆರೋಪಿಯು ನಮ್ಮ ಊರು ದಬ್ಬಹಳ್ಳಿಗೆ ಬಂದಿಲ್ಲ ಎಂದರೆ ಸರಿಯಲ್ಲ. ಮುಮಾ.3 ಮತ್ತು 4 ನ್ನು ಈ ಕೇಸಿಗಾಗಿ ಸೃಷ್ಟಿಸಿಕೊಂಡಿದ್ದು ಎಂದರೆ ಸರಿಯಲ್ಲ. 1 ನೇ ಆರೋಪಿಗೆ ತೊಂದರೆ ಮಾಡಲು ಈ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಡಗೋಲಿನಿಂದ ಯಾವುದೇ ಹಲ್ಲೆ ಮಾಡಿಲ್ಲ , ಅದನ್ನು ನಾನು ನನ್ನಮನೆಯಿಂದ ತಂದಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎ.ಸಿ. ವಕೀಲರಿಂದ</u>**

9. ನಮ್ಮ ತಂದೆ ತಾಯಿಗೆ 4 ಜನ ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ನಾನು ರೇಷ್ಮೆ ಹುಳು ಸಾಕಾಣೆ ಮಾಡುತ್ತೇನೆ. ಶಾಂತಮ್ಮನವರ ತಂದೆ ಹೆಸರು ದಾಸಯ್ಯ. ಸದರಿ ದಾಸಯ್ಯನಿಗೆ ಇಬ್ಬರು ಗಂಡು ಮಕ್ಕಳು. ಶಾಂತಮ್ಮ ನವರ ತಾಯಿ ಜಯಮ್ಮ ಕೂಡ ಕೂಲಿ ಕೆಲಸ ಮಾಡುತ್ತಾರೆ. ಗ್ರಾಮದಲ್ಲಿ ಕೆಲಸಕ್ಕೆ ಕರೆಯುವ ಎಲ್ಲರ ಮನೆಗೆ ಶಾಂತಮ್ಮ ಮತ್ತು ಜಯಮ್ಮ ಹೋಗುತ್ತಾರೆ ಎಂದರೆ ಸರಿ. ಘಟನೆ ನಡೆಯುವ ಒಂದು ವರುಷದ ಹಿಂದಿನಿಂದ 1 ನೇ ಆರೋಪಿಯು ಶಾಂತಮ್ಮನವರ ಜೊತೆ ಇದ್ದಾನೆ. 1 ನೇ ಆರೋಪಿಗೂ ಮತ್ತು ಶಾಂತಮ್ಮನವರಿಗೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಶಾಂತಮ್ಮ ಮತ್ತು ಜಯಮ್ಮನವರು, 1 ನೇ ಆರೋಪಿಗೆ ಕುಮ್ಮಕ್ಕು ನೀಡಿ ನನ್ನ ಮೇಲೆ ಹಲ್ಲೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಮ್ಮ ಸೇರಿ, 2 ಮತ್ತು 3 ನೇ ಆರೋಪಿಗಳ ಮೇಲೆ ಸುಳ್ಳು ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಶಾಂತಮ್ಮಗೂ ಸಂಬಂಧ ಇರಲಿಲ್ಲ ಎಂದರೆ ಸರಿ. ಶಾಂತಮ್ಮನವರು, ನನ್ನ ಜೊತೆ ನಾಗರಾಜು ರವರ ತೋಟಕ್ಕೆ ಕೂಲಿ ಕೆಲಸಕ್ಕೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಜಯಮ್ಮ ಕೂಡ ನಾಗರಾಜು ರವರ ತೋಟಕ್ಕೆ ಕೂಲಿ ಕೆಲಸಕ್ಕೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಜೊತೆ ಶಾಂತಮ್ಮನವರಿಗೆ ಜೊತೆ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು, ಶಾಂತಮ್ಮನವರ ಮನೆಯಲ್ಲಿ ಇರಲಿಲ್ಲ, ನನ್ನ ತಮ್ಮನ ಮಾತು ಕೇಳಿ ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆಗೂ, 2 ಮತ್ತು 3 ನೇ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಕೃತ್ಯಕ್ಕೆ 2 ಮತ್ತು 3 ನೇ ಆರೋಪಿಗಳು ಕುಮ್ಮಕ್ಕು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ, ನನ್ನ ತಮ್ಮನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿಗಳು ಈ ಕೃತ್ಯದಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಯಾದವ ಕೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.